ಇ) ರಾಜ್ಯವು ಪಡೆದಿರುವ ಸಾಲದಲ್ಲಿ ಬಂಡವಾಳ ಹೂಡಿಕೆಯ ಮಾಹಿತಿ ಇರುವುದಿಲ್ಲ ಆದರೆ 31.03.98ರ ಅಂತ್ಯಕ್ಕೆ ರಾಜ್ಯ ಉದ್ದಿಮೆಗಳಲ್ಲಿ ಒಟ್ಟು ಬಂಡವಾಳ ಹೂಡಿಕೆ (ಸಾಲವು ಸೇರಿದಂತೆ) 5741.52 ಕೋಟಿ ರೂಗಳು ಆಗಿರುತ್ತದೆ.

ಈ) 1993-94 ರಿಂದ 1997-98ರ ವರೆಗಿನ 5 ವರ್ಷದ ಅವಧಿಯಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾದ ಷೇರು ಬಂಡವಾಳದ ಮೇಲಿನ ಹುಟ್ಟುವಳಿ (Dividend) ವಿವರ ಈ ರೀತಿ ಇದೆ.

	ಕೋಟಿಗಳಲ್ಲಿ
1993-94	2.13
1994-95	3.36
1995-96	3.71
1996-97	12.07
1997-98	1.98
ಒಟ್ಟು	**23.25**

31.03.98ರ ವರೆಗಿನ ಸಂಚಿತ ನಷ್ಟವು (Accumulated Loss) 993.05 ಕೋಟಿ ರೂ.ಗಳು ಆಗಿತ್ತು.

ರಾಜ್ಯದಲ್ಲಿರುವ ಮದ್ಯದಂಗಡಿಗಳ ಬಗ್ಗೆ

2711 (3241) ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಬೆಂಗಳೂರಿನಂತಹ ನಗರದಲ್ಲಿ ಮದ್ಯದ ಅಂಗಡಿಗಳು ಅಬಕಾರಿ ಇಲಾಖೆ ನಿಗಧಿಪಡಿಸಿದ ಸಮಯಕ್ಕೆ ಮುಚ್ಚುತ್ತಿಲ್ಲ; ಇದರಿಂದ ನಾಗರೀಕರಿಗೆ ತೀರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಲು ಮೀನ-ಮೇಷ ಎಣಿಸುವುದೇಕೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) - ಬಂದಿದೆ -

ಆ) ಸರ್ಕಾರವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಮೀನ-ಮೇಷ ಎಣಿಸುವ ಪ್ರಶ್ನೆಯೇ ಇಲ್ಲ. ನಿಗಧಿತ ಸಮಯ ಮೀರಿ ವ್ಯಾಪಾರ ನಡೆಸುವ ಮದ್ಯದಂಗಡಿಗಳ ವಿರುದ್ದ ರಾಜ್ಯದಲ್ಲಿ ಒಟ್ಟು 880 ಮೊಕದ್ದಮೆಗಳನ್ನು ದಾಖಲು ಮಾಡಲಾಗಿದ್ದು ಈ ಪೈಕಿ ಬೆಂಗಳೂರು ನಗರದಲ್ಲಿ ದಾಖಲಿಸಲಾದ ಮೊಕದ್ದಮೆಗಳ ಸಂಖ್ಯೆ 689 ಆಗಿರುತ್ತದೆ.